ಸರ್ಕಾರದಿಂದ ಕೈಗೊಳ್ಳಬೇಕಾದ ತಡೆಗೋಡೆಯ ನಿರ್ಮಾಣ ಕಾಮಗಾರಿಯನ್ನು ಸದ್ಯಕ್ಕೆ ಪ್ರಾರಂಭಿಸಿರುವುದಿಲ್ಲ.

ಆ) ಮೇಲೆ ಹೇಳಿದ ಕಾರಣಗಳಿಂದಾಗಿ ಹೊನ್ನಾವರ ಮೀನುಗಾರಿಕೆ ಬಂದರಿನಲ್ಲಿ ಕೈಗೊಳ್ಳಬೇಕಾದ ಬ್ರೇಕ್‌ವಾಟರ್ ಕಾಮಗಾರಿಯನ್ನು ಮೀನುಗಾರಿಕೆ ಇಲಾಖೆಯ ಮೂಲಕ ಸದ್ಯಕ್ಕೆ ಪ್ರಾರಂಭಿಸಿರುವುದಿಲ್ಲ.

ಇ) ಹೊನ್ನಾವರ ಪೋರ್ಟ್ ಪ್ರೈವೇಟ್ ಲಿಮಿಟೆಡ್, ಹೊನ್ನಾವರರವರು ಸದರಿ ಸ್ಥಳದಲ್ಲಿ ಕಾಮಗಾರಿಯನ್ನು ಪ್ರಾರಂಭ ಮಾಡುವ ಮುನ್ನ ಸಂಬಂಧಪಟ್ಟ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ಸರ್ಕಾರದೊಂದಿಗೆ ಸೂಕ್ತ ಒಪ್ಪಂದವನ್ನು ಮಾಡಿಕೊಂಡನಂತರ ಪ್ರಾರಂಭಿಸಲಾಗುವುದು.

ಹೋಟೆಲ್ ಕಾರ್ಮಿಕರ ಅಭಿವೃದ್ಧಿಗಾಗಿ ಯೋಜನೆ

396(637); ಶ್ರೀ ಮೊಹಿಯುದ್ದೀನ್ ಬಾವ ಬಿ.ಎ. (ಮಂಗಳೂರು ಉತ್ತರ)

1) ರಾಜ್ಯದಲ್ಲಿನ ಹೋಟೆಲುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು?

2) ಹಾಗಿದ್ದಲ್ಲಿ ಈ ಹೋಟೆಲ್ ಕಾರ್ಮಿಕರುಗಳ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳಾವುವು?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

1) ಹೋಟೆಲ್ ಉದ್ದಿಮೆಗಳಿಗೆ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961 ಅನ್ವಯವಾಗುತ್ತಿದ್ದು, ರಾಜ್ಯದಲ್ಲಿ ನೋಂದಾಯಿತ ಹೋಟೆಲ್‌ಗಳಲ್ಲಿ ಒಟ್ಟು 2,23,393 ಕಾರ್ಮಿಕರು ಇರುತ್ತಾರೆ.

2)

1] ಹೋಟೆಲ್ ಉದ್ದಿಮೆಯನ್ನು ಕನಿಷ್ಟ ವೇತನ ಕಾಯ್ದೆ, 1948 ರಡಿಯಲ್ಲಿ ಅನುಸೂಚಿತ ಉದ್ದಿಮೆಯೆಂದು ಪರಿಗಣಿಸಿದ್ದು, 1948 ನೇ ಸಾಲಿನಲ್ಲಿ ಅನುಸೂಚಿತ ಪಟ್ಟಿಗೆ ಸೇರಿಸಲಾಗಿರುತ್ತದೆ. ಪ್ರಥಮ ಬಾರಿಗೆ ಕನಿಷ್ಟ ವೇತನವನ್ನು 1960 ನೇ ಸಾಲಿನಲ್ಲಿ ನಿಗದಿ ಮಾಡಿದ್ದು, ನಂತರ 1967, 1973, 1978, 1984, 1986, 1994, 2003, 2011ರಲ್ಲಿ ವೇತನ ದರಗಳನ್ನು ಪರಿಷ್ಕರಿಸಲಾಗಿರುತ್ತದೆ. ದಿನಾಂಕ 01–04–2014 ರಿಂದ ದೊರಕುವ ವೇತನ ದರಗಳನ್ನು ಪಟ್ಟಿ ಮಾಡಿ **ಅನುಬಂಧ–ಅ** ರಲ್ಲಿ ಒದಗಿಸಿದೆ.

2] 10 ಮತ್ತು 10 ಕ್ಕಿಂತ ಹೆಚ್ಚು ಕಾರ್ಮಿಕರು ಇರುವ ಸಂಸ್ಥೆಗಳಿಗೆ ಇಎಸ್ಐ, ಉಪದಾನ, ಬೋನಸ್ ಪಾವತಿ ಕಾಯ್ದೆಗಳನ್ನು ಜಾರಿಗೆ ತರಲಾಗುತ್ತಿದೆ.

3] 20 ಮತ್ತು 20 ಕ್ಕಿಂತ ಹೆಚ್ಚು ಕಾರ್ಮಿಕರು ಇರುವ ಸಂಸ್ಥೆಗಳಿಗೆ ಪಿಎಫ್ ಕಾಯ್ದೆಯನ್ನು ಜಾರಿಗೆ ತರಲಾಗುತ್ತಿದೆ.

4] 10 ಮತ್ತು 10 ಕ್ಕಿಂತ ಹೆಚ್ಚು ಮಹಿಳಾ ಕಾರ್ಮಿಕರು ಇದ್ದಲ್ಲಿ ಹೆರಿಗೆ ಭತ್ಯೆ ಕಾಯ್ದೆಯನ್ನು ಜಾರಿಗೆ ತರಲಾಗುತ್ತಿದೆ.

5] ಹೋಟೆಲ್ ಕಾರ್ಮಿಕರು ಹೋಟೆಲ್‌ನಲ್ಲಿ ಆಹಾರ ಸೇವಿಸಿದಲ್ಲಿ ರಿಯಾಯಿತಿ ದರದಲ್ಲಿ ಆಹಾರವನ್ನು ತೆಗೆದುಕೊಳ್ಳಬಹುದು.

6] 50 ಮತ್ತು 50 ಕ್ಕಿಂತ ಹೆಚ್ಚು ಕಾರ್ಮಿಕರು ಇದ್ದಲ್ಲಿ ಅಂತಹ ಸಂಸ್ಥೆಗಳಿಗೆ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶ) ಕಾಯ್ದೆ ಅನ್ವಯವಾಗುತ್ತಿದ್ದು, ಅದರಲ್ಲಿ ಸೇವಾ ಷರತ್ತುಗಳನ್ನು ನಿಯಂತ್ರಿಸಲಾಗುತ್ತಿದೆ.

7] ಕರ್ನಾಟಕ ಔದ್ಯಮಿಕ (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳು) ಕಾಯ್ದೆಯನ್ವಯ ವೇತನ ಸಹಿತ 10 ದಿನಗಳ ರಜೆ ದೊರಕುತ್ತದೆ.

8] ಪ್ರತಿ 20 ದಿನ ಕೆಲಸ ನಿರ್ವಹಿಸಿದಲ್ಲಿ 1 ದಿನದ ವೇತನ ಸಹಿತ ರಜೆ ದೊರಕುತ್ತದೆ.

9] ಮಹಿಳಾ ಮತ್ತು ಪುರುಷ ಕಾರ್ಮಿಕರು ಒಂದೇ ರೀತಿಯ ಕೆಲಸ ನಿರ್ವಹಿಸಿದಲ್ಲಿ ಸಮಾನ ವೇತನ ಪಾವತಿ ಕಾಯ್ದೆಯನ್ನು ಜಾರಿಗೆ ತರಲಾಗುತ್ತಿದೆ.

10 ಕ್ಕಿಂತ ಕಡಿಮೆ ಕಾರ್ಮಿಕರು ಇರುವ ಸಂಸ್ಥೆಗಳಲ್ಲಿ ದುಡಿಯುವ ಕಾರ್ಮಿಕರನ್ನು ಅಸಂಘಟಿತ ವಲಯದ ಕಾರ್ಮಿಕರೆಂದು ಪರಿಗಣಿಸಲಾಗಿದ್ದು, ಅವರುಗಳು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ವತಿಯಿಂದ ಎನ್‌ಪಿಎಸ್ ಲೈಟ್ ಸ್ವಾವಲಂಬನ್ ಪಿಂಚಣಿ ಯೋಜನೆಯ ಸೌಲಭ್ಯವನ್ನು ಪಡೆದುಕೊಳ್ಳಬಹುದು.

ಹೋಟೆಲ್ ಕಾರ್ಮಿಕರು ಬಿ.ಪಿ.ಎಲ್. ಕುಟುಂಬಕ್ಕೆ ಸೇರಿದವರಾಗಿದ್ದಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ವಾರ್ಷಿಕ ₹ 30,000/– ಗಳವರೆಗೆ ಉಚಿತ ಆರೋಗ್ಯ ಸೌಲಭ್ಯವನ್ನು ಪಡೆಯಬಹುದಾಗಿದೆ.

ಹೋಟೆಲ್ ಉದ್ದಿಮೆಯಲ್ಲಿ ವಾಹನ ಚಾಲಕರಾಗಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅಂತಹವರನ್ನು ಖಾಸಗಿ ವಾಣಿಜ್ಯ ವಾಹನ ಚಾಲಕರ ವಿಮಾ ಯೋಜನೆಯ ವ್ಯಾಪ್ತಿಗೊಳಪಡುತ್ತಿದ್ದು, ವಿಮಾ ಸೌಲಭ್ಯವನ್ನು ಪಡೆಯಬಹುದಾಗಿದೆ.

50 ಮತ್ತು 50ಕ್ಕಿಂತ ಹೆಚ್ಚು ಕಾರ್ಮಿಕರು ಇರುವ ಸಂಸ್ಥೆಗಳಿಗೆ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ ಅನ್ವಯವಾಗುತ್ತಿದ್ದು, ಇದರಡಿಯಲ್ಲಿ ಪ್ರತಿ ವರ್ಷ ₹ 6/– ವಂತಿಕೆ ಸಲ್ಲಿಸಿರುವ ಕಾರ್ಮಿಕರು ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ, ವಾರ್ಷಿಕ ಕ್ರೀಡಾ ಚಟುವಟಿಕೆ ಮತ್ತು ಕಂಪ್ಯೂಟರ್ ತರಬೇತಿಗಳಿಗೆ ನೆರವು, ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ & ಕಾಯಿಲೆಗಳಿಗೆ ಧನ ಸಹಾಯ ಮತ್ತು ಇತ್ಯಾದಿ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು.

ಅನುಬಂಧ-೮

2014-15ನೇ ಸಾಲಿಗೆ "ಯೋಚೆಲ್" ಕಾರ್ಮಿಕರಿಗೆ ಪಾವತಿಮಾಡಬೇಕಾದ ವೇತನ ದರಗಳು

ಕ್ರ ಸಂ	ಕೆಲಸದ ವರ್ಗಗಳು	ಕನಿಷ್ಠ ವೇತನ ಪ್ರತಿ ತಿಂಗಳಿಗೆ			
			ವಲಯ - I	ವಲಯ - II	ವಲಯ - III
1	2	3	4	5	6
1		ಪ್ರಾಥಮಿಕ ವೇತನ	4160.00	4137.00	4101.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6463.20	6440.20	6404.20
2.		ಪ್ರಾಥಮಿಕ ವೇತನ	4134.00	4101.00	4087.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6330.20	6304.20	6290.20
3.		ಪ್ರಾಥಮಿಕ ವೇತನ	4101.00	4087.00	4076.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6304.20	6301.20	6279.20
4.		ಪ್ರಾಥಮಿಕ ವೇತನ	4087.00	4076.00	4076.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6301.20	6279.20	6279.20
5.		ಪ್ರಾಥಮಿಕ ವೇತನ	4076.00	4076.00	4076.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6279.20	6279.20	6279.20
6.		ಪ್ರಾಥಮಿಕ ವೇತನ	4076.00	4076.00	4076.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6279.20	6279.20	6279.20
7.		ಪ್ರಾಥಮಿಕ ವೇತನ	4076.00	4076.00	4076.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6279.20	6279.20	6279.20
8.		ಪ್ರಾಥಮಿಕ ವೇತನ	4076.00	4076.00	4076.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6279.20	6279.20	6279.20
9.		ಪ್ರಾಥಮಿಕ ವೇತನ	4160.00	4134.00	4101.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6463.20	6437.20	6404.20
10.		ಪ್ರಾಥಮಿಕ ವೇತನ	4134.00	4101.00	4087.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6330.20	6304.20	6290.20
11.		ಪ್ರಾಥಮಿಕ ವೇತನ	3871.00	3837.00	3797.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6027.20	6040.20	6060.20
12.		ಪ್ರಾಥಮಿಕ ವೇತನ	4160.00	4129.00	4101.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6463.20	6430.20	6404.20
13.		ಪ್ರಾಥಮಿಕ ವೇತನ	4088.00	4076.00	4076.00
		ತುಟ್ಟಿಭತ್ಯೆ	2303.20	2303.20	2303.20
		ಒಟ್ಟು	6391.20	6379.20	6379.20

15.	ಪೂಜೆ ಮಂಡಿಬಿಬಿಡು/ ಜಮಖಾನ/ಕಾಪಲುಗಾರ/ಕಸಗುಡಿಸುವವರು/ ಕಛೇರಿ ಸಹಾಯಕ ಮತ್ತು ಮೇಲ್ಕಂಡ ಕೆಲಸಗಳಿಗೆ ಹೋಲುವ ರೀತಿಯ ಇನ್ನಾವುದೇ ರೀತಿಯ ಕೆಲಸ ಮಾಡುವವರು	ಮೂಲ ವೇತನ ತುಟ್ಟಿಭತ್ಯೆ ಒಟ್ಟು	3874-00 2203-20 6077-20	3847-00 2203-20 6050-20	3757-00 2203-20 5960-20-
16.	ಮೇಲ್ಕಂಡ ವರ್ಗಗಳ ಹೊರತುಪಡಿಸಿ ಇನ್ನಾವುದೇ ರೀತಿಯ ಪರಿಶ್ರಮವಿಲ್ಲದ ಕೆಲಸ ಮಾಡುವವರು				

ವಲಯ–1 : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಅರ್ಬನ್ ಅಗ್ಲೋಮರೇಷನ್ ಪ್ರದೇಶ ಹಾಗೂ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು.

ವಲಯ–2 : ರಾಜ್ಯದ ಜಿಲ್ಲಾ ಕೇಂದ್ರಗಳು

ವಲಯ–3 : ವಲಯ 1 ಮತ್ತು 2 ರಲ್ಲಿ ಸೇರಿಸದೇ ಇರುವ ರಾಜ್ಯದ ಇತರೆ ಪ್ರದೇಶಗಳು